ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು) :

ಅ) ಮಂಗಳೂರು–ಕಬಕ ಪುತ್ತೂರು ವಿಭಾಗದ ಕಾಮಗಾರಿ ಮುಗಿದಿದೆ. ಕಬಕಪುತ್ತೂರು–ಸುಬ್ರಮಣ್ಯ ಮತ್ತು ಸುಬ್ರಮಣ್ಯ–ಸಕಲೇಶಪುರ ವಿಭಾಗಗಳ ಕಾಮಗಾರಿ ಪ್ರತಿಯಲ್ಲಿದೆ. ಪೂರ್ಣ ಕಾಮಗಾರಿಯು ಮಾರ್ಚ್ 2005ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಆ) 2003–04ನೇ ಸಾಲಿನಲ್ಲಿ ರಾಜ್ಯದ ಆಯವ್ಯಯದಲ್ಲಿ ರೂ. 10.50 ಕೋಟಿಗಳನ್ನು ಒದಗಿಸಲಾಗಿದೆ. ರೈಲ್ವೆ ಮಂತ್ರಾಲಯವು ಇದುವರೆವಿಗೂ ರೂ. 42.85 ಕೋಟಿಗಳನ್ನು ವೆಚ್ಚಮಾಡಿದೆ.

ಇ) ಕರ್ನಾಟಕ ಸರ್ಕಾರವು ಒಟ್ಟಾರೆಯಾಗಿ ರೂ. 45.00 ಕೋಟಿಗಳನ್ನು ಒದಗಿಸಬೇಕಿದೆ. ಈವರೆವಿಗೂ ರೂ. 13.00 ಕೋಟಿಗಳನ್ನು ಬಿಡುಗಡೆ ಮಾಡಿದೆ. ಉಳಿದ ಬಾಕಿಯನ್ನು ಈ ವರ್ಷದ ಮುಂದಿನ ಭಾಗದಲ್ಲಿ ಬಿಡುಗಡೆ ಮಾಡಲಾಗುವುದು ಮತ್ತು ಆಯವ್ಯಯದಲ್ಲಿ ಮುಂದಿನ ವರ್ಷ ಒದಗಣಿ ಮಾಡಿದ ನಂತರ ಬಿಡುಗಡೆ ಮಾಡಲಾಗುವುದು.

ಈ) ಉದ್ಭವಿಸುವುದಿಲ್ಲ.

ಉ) ಕಬಕಪುತ್ತೂರು–ಮಂಗಳೂರು ನಡುವಿನ ಸೇವೆಯು ಡಿಸೆಂಬರ್ 2003ರಲ್ಲಿ ಪ್ರಾರಂಭಗೊಂಡಿದೆ.

ಊ) ಸಂಪೂರ್ಣ ಕಾಮಗಾರಿಯು ಮಾರ್ಚ್ 2005ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಸೇವೆಯು ತದನಂತರ ಪ್ರಾರಂಭವಾಗುವುದು.

ಬೆಂಗಳೂರು–ದೇವನಹಳ್ಳಿಯ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ

267 (549): ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) ಮಾನ್ಯ ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು–ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಇಲ್ಲಿಯವರೆವಿಗೂ ಎಷ್ಟು ಎಕರೆಯ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ;

(ಸ್ವಾಧೀನಪಡಿಸಿಕೊಳ್ಳಲಾದ ಜಮೀನಿನ ಸರ್ವೆ ನಂಬರ್ ಹಾಗೂ ವಿಸ್ತೀರ್ಣದ ವಿವರ ಒದಗಿಸುವುದು) :

ಆ) ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿ ಎಷ್ಟು ಮಂದಿ ರೈತರಿಗೆ ಸರ್ಕಾರದಿಂದ ಪರಿಹಾರ ಧನವನ್ನು ಮಂಜೂರು ಮಾಡಲಾಗಿದೆ: (ವಿವರ ಒದಗಿಸುವುದು)

ಇ) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಪಡೆಯಲಾದ ಅನುದಾನದ ಮೊತ್ತವೆಷ್ಟು (ವಿವರ ಒದಗಿಸುವುದು) ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು) :

ಅ) ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ (8) ಗ್ರಾಮಗಳು ಮತ್ತು ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕ್ (3) ಗ್ರಾಮಗಳು ಒಟ್ಟು (11) ಗ್ರಾಮಗಳಲ್ಲಿ 2462.12 ಎಕರೆ ಹಿಡುವಳಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಆ) ಭೂಸ್ವಾಧೀನಪಡಿಸಿಕೊಂಡ ಹಿಡುವಳಿ ಜಮೀನಿನ 1139 ಮಂದಿ ರೈತರಿಗೆ ರೂ. 116.47 ಕೋಟಿ ಪರಿಹಾರವನ್ನು ವಿತರಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

ಪರಿಹಾರ ಪಡೆದ ರೈತರ ಸಂಖ್ಯೆ 1139

1) ಭೂಪರಿಹಾರ ರೂ. 107.56 ಕೋಟಿ

2) ಮಾಲ್ಕಿ ಮತ್ತು ಕಟ್ಟಡ ಮೌಲ್ಯ ರೂ. 8.20 ಕೋಟಿ

3) ಗ್ರಾಮಠಾಣ ನಿವೇಶನ

ಮನೆ ಬಾಬ್ತು ಪರಿಹಾರ ರೂ. 0.71 ಕೋಟಿ

ಒಟ್ಟು ರೂ. 116.47 ಕೋಟಿ

ಇ) ಕೇಂದ್ರ ಸರ್ಕಾರವು ಭಾರತೀಯ ವೈಮಾನಿಕ ಪ್ರಾಧಿಕಾರದ ಮೂಲಕ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮದಲ್ಲಿನ ಉದ್ದೇಶಿತ ಈಕ್ವಿಟಿ ಷೇರು ಬಂಡವಾಳದ ಶೇಕಡಾ 13 ರಷ್ಟರ ಮೊತ್ತವನ್ನು (ಸುಮಾರು 40–00 ಕೋಟಿ ರೂ.ಗಳೂ) ನೀಡಲಿದೆ.

ರಾಜ್ಯದಲ್ಲಿ ಹೊಸ ಪಶು ಚಿಕಿತ್ಸಾಲಯ ಆಸ್ಪತ್ರೆಗಳು

268 (131): ಶ್ರೀ ಷಡಾಕ್ಷರಿ ಕೆ. (ತಿಪಟೂರು) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಪಶು ಚಿಕಿತ್ಸಾಲಯಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ ಎಷ್ಟು ಪಶು ಚಿಕಿತ್ಸಾಲಯಗಳನ್ನು ತೆರೆಯಲಾಗುವುದು?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಮೀನುಗಾರರಿಗೆ ಮನೆಗಳ ಹಂಚಿಕೆ

269 (132): ಶ್ರೀ ಷಡಾಕ್ಷರಿ ಕೆ. (ತಿಪಟೂರು) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಡ ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆಯಲ್ಲಿ ಕಳೆದ ವರ್ಷ ನೀಡಿರುವ ಮನೆಗಳು ಎಷ್ಟು;

ಆ) 2003–04ನೇ ಸಾಲಿನಲ್ಲಿಯೂ ಸಹ ಈ ಯೋಜನೆಯನ್ನು ಮುಂದುವರೆಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಇ) ಹಾಗಿದ್ದಲ್ಲಿ ಎಷ್ಟು ಮನೆಗಳನ್ನು ನೀಡಲಾಗಿದೆ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಬಡ ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆ 2ರಡಿಯಲ್ಲಿ 2002–03ನೇ ಸಾಲಿನಲ್ಲಿ 2000 ಮನೆಗಳು ಮಂಜೂರಾಗಿದೆ.

ಆ) ಹೌದು.

ಇ) 2003–04ನೇ ಸಾಲಿನಲ್ಲಿ 1000 ಮನೆಗಳನ್ನು ಮಂಜೂರು ಮಾಡಲಾಗಿದೆ.